ESTD - 1964

ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಪ್ರತಿಷ್ಠಿತ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ • ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
ಊಟಿರಸ್ತೆ, ಮೈಸೂರು-೫೭೦ ೦೨೫

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 09.03.2016

## ಪ್ರಕಟಣೆ ಕೃಪೆಗಾಗಿ

### ಮಹಿಳಾ ಸಬಲೀಕರಣ– ಒಂದು ಸವಾಲು

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರಿನಲ್ಲಿ ದಿನಾಂಕ:08.03.2016 ರಂದು ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜನ್ಮ ಶತಮಾನೋತ್ಸವ ಮತ್ತು ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಏರ್ಪಡಿಸಲಾಗಿತ್ತು. ಶ್ರೀಮತಿ ಕೆ ಸರಸ್ವತಿ, ನಿರ್ದೇಶಕರು, ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಹಿಳೆಯು ಘನತೆಯುಕ್ತ ಬದುಕನ್ನು ಬದುಕಬೇಕಾದರೆ, ಪುರುಷನಲ್ಲಿ ಸ್ವನಿಯಂತ್ರಣ ಶಕ್ತಿ ಮತ್ತು ತಮ್ಮ ನಡುವಳಿಕೆಗೆ ತಾವೇ ಜವಾಬ್ದಾರರು ಎಂಬ ವಿಚಾರಕ್ಕೆ ಬದ್ಧರಾಗಿರಬೇಕೆಂದು ಕರೆನೀಡಿದರು.

ಗಂಡುಮಕ್ಕಳ ಸಾಮಾಜಿಕರಣ ಪ್ರಕ್ರಿಯೆಯಲ್ಲಿ ಬದಲಾವಣೆತಂದು, ಮಹಿಳೆಯನ್ನು ಭೋಗದ ವಸ್ತುವನ್ನಾಗಿ ನೋಡುವ ದೃಷ್ಟಿಕೋನವನ್ನು ಹೋಗಲಾಡಿಸುವುದು, ಮಹಿಳೆಯ ದುಡಿಮೆಯನ್ನು ಗೌರವಿಸುವುದು, ಅವರ ಬದುಕುವ ಹಕ್ಕಿಗೆ ಚ್ಯುತಿಬಾರದಿರುವ ನಡುವಳಿಕೆಯನ್ನು ರೂಢಿಸಿಕೊಳ್ಳುವುದು ಇಂದಿನ ಸ್ವಸ್ಥ ಸಮಾಜಕ್ಕೆ ಅತಿ ಮುಖ್ಯವಾದ ಅವಶ್ಯಕಾಂಶ ಎಂದು ತಿಳಿಸಿದರು. ಸಮಾಜದಲ್ಲಿ ಸಮಾನತೆಯ ಅಂಶವು ಗೌರವಪೂರ್ವಕವಾಗಿಯೂ, ಧನಾತ್ಮಕವಾಗಿಯೂ ಇರಬೇಕು. ಆದರೆ, ಸಮಾನತೆಯನ್ನು ಕೇಳಿ ಪಡೆದುಕೊಳ್ಳುವ ಸಂಸ್ಕೃತಿಯು ನಶಿಸಬೇಕು ಎಂದು ಹೇಳಿದರು. ಈ ನಿಟ್ಟಿನಲ್ಲಿ ಮಹಿಳೆಗೆ ನಿರ್ಧಾರ ತೆಗೆದುಕೊಳ್ಳುವಲ್ಲಿ ಅವಕಾಶ ಮತ್ತು ಅಧಿಕಾರವನ್ನು ಯಾವುದೇ ಹಿಂಜರಿಕೆ ಇಲ್ಲದೇ ನೀಡುವುದು ಮಹಿಳೆಯ ಸಬಲೀಕರಣಕ್ಕೆ ನಾಂದಿ ಎಂದು ಹೇಳಿದರು.

ಕು. ಜಾಹ್ನವಿ ಎಸ್ ಪ್ರಾರ್ಥನೆ ಮಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ ಎಂ ಮಹದೇವಪ್ಪನವರು ಸ್ವಾಗತಿಸಿದರು. ಶ್ರೀಮತಿ ಸುಸ್ಮಿತಾ ಬಿ ರವರು ವಂದಿಸಿದರು ಮತ್ತು ಡಾ ಕುಮುದಿನಿ ಅಚ್ಚಿ ರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಪ್ರಾಂಶುಪಾಲರು
(ಪ್ರೊ ಎಂ ಮಹದೇವಪ್ಪ)

ಪ್ರಾಚಾರ್ಯರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570 025.

ಗೆ
ಸಂಪಾದಕರು
--------------
--------------
ಮೈಸೂರು